ಅದನ್ನು ನೀವು ತಿಳಿದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇದು ಸರಿಯಲ್ಲ.

(ಗೊಂದಲ)

**ಅಧ್ಯಕ್ಷರು:** ದಯಮಾಡಿ ಒಂದಲ್ಲ? ಇನ್ನೊಂದು ಸಾರಿ ಯೋಚನೆ ಮಾಡಿ.

(ಗೊಂದಲ)

**ಅಧ್ಯಕ್ಷರು:** ದಿನಾಂಕ 06.07.2005ರ 24ನೇ ಪಟ್ಟಿಯಲ್ಲಿನ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 14 ಪ್ರಶ್ನೆಗಳಿಗೆ ಉತ್ತರಗಳನ್ನು ಮತ್ತು ಲಿಖಿತ ಮೂಲಕ ಉತ್ತರಿಸುವ 179 ಪ್ರಶ್ನೆಗಳ ಪೈಕಿ 143 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅನುಬಂಧ–1

ಈಗ ನಾಳೆ ಬೆಳಿಗ್ಗೆ 11.00 ಗಂಟೆಗೆ ಪುನಃ ಸೇರುವಂತೆ ಸದನವನ್ನು ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 3 ಗಂಟೆ 41 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 7ನೇ ಜುಲೈ 2005ರ ಗುರುವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

**ಅನುಬಂಧ–1**

**346(4065);** ಶ್ರೀ ಶಿವಾನಂದ ನಾಯಕ್ (ಭಟ್ಕಳ); ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು; ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು.

ಅ) ಭಟ್ಕಳದ ತಾಲ್ಲೂಕು ಆಸ್ಪತ್ರೆಯಲ್ಲಿ ಖಾಲಿ ಇರುವ ಸರ್ಜನರ ಹುದ್ದೆಯನ್ನು ಭರ್ತಿ ಮಾಡುವಲ್ಲಿ ಸರ್ಕಾರ ಇದುವರೆಗೆ ತೆಗೆದುಕೊಂಡ ಕ್ರಮವೇನು;

ಆ) ಸಾರ್ವಜನಿಕರಿಗೆ ಅನುಕೂಲವಾಗುವ ದೃಷ್ಟಿಯಿಂದ ಖಾಲಿ ಇರುವ ಹುದ್ದೆಯನ್ನು ಯಾವಾಗ ತುಂಬಲಾಗುವುದು;

ಇ) ಈ ಆಸ್ಪತ್ರೆಯಲ್ಲಿ ಪೋಸ್ಟ್‌ಮಾರ್ಟಂ ಮಾಡುವಾಗ ವೈದ್ಯರಿಗೆ ಸಹಕರಿಸುವ ಗ್ರೂಪ್ ಡಿ ಹುದ್ದೆ ಖಾಲಿ ಇರುವುದು ನಿಜವೇ;

ಈ) ಇದರಿಂದ ತುರ್ತು ಅವಧಿಯಲ್ಲಿ ಶವ ಪರೀಕ್ಷೆಗೆ ವಿಳಂಬವಾಗಿ ವಾರಸುದಾರರಿಗೆ ತೊಂದರೆಯಾಗುತ್ತಿರುವುದರ ಬಗ್ಗೆ ಸರ್ಕಾರದ ನಿಲುವೇನು;

ಉ) ಹಾಗಿದ್ದಲ್ಲಿ ಈ ಹುದ್ದೆಗಳನ್ನು ತುಂಬುವಲ್ಲಿ ಸರ್ಕಾರ ಯಾವ ಕ್ರಮಕೈಗೊಂಡಿದೆ. ವಿವರ ಒದಗಿಸುವುದು?